ವಿಜಯವಾಣಿ
ಕನ್ನಡಿಗರ ಧ್ವನಿ

# ರಸಾನುಭವದ ಕವಿ ಕೆಎಸ್‌ನ

ಪದ್ಯ ಹಾಗೂ ಭಾವಗೀತೆಗಳಲ್ಲೂ ರಸಾನುಭವ ತೋರಿಸಬಹುದು ಎಂಬ ಸಾಧ್ಯತೆಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿಕೊಟ್ಟ ಕವಿ ಕೆ.ಎಸ್. ನರಸಿಂಹಸ್ವಾಮಿ ಎಂದು ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟಿದ್ದಾರೆ.

ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ಪ್ರಯುಕ್ತ ಜೈನ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಪ್ರಕಾರಗಳಲ್ಲಿ ಪದ್ಯ ಹಾಗೂ ಭಾವಗೀತೆಗಳಿಗೆ ಅದರದ್ದೇ ಆದ ಮಿತಿಗಳಿರುತ್ತವೆ. ಹಾಗಾಗಿ ಕಥನಕ್ಕೆ ಸಾಧ್ಯವಾಗುವ ರಸಾನುಭವ ಭಾವಗೀತೆಗಳಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ ಎಂಬ ವಾದವಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಕನ್ನಡ ಸಾಹಿತ್ಯ ಲೋಕದ ಮಟ್ಟಿಗೆ ಭಾವಗೀತೆಗಳಲ್ಲೂ ರಸಾನುಭವ ನೀಡಬಹುದು ಎಂಬ ಸಾಧ್ಯತೆಯನ್ನು ತೋರಿಸಿಕೊಟ್ಟ ಮೇರು ಕವಿ ಕೆ.ಎಸ್. ನರಸಿಂಹಸ್ವಾಮಿ. ಅವರ ಪ್ರತಿ ಪದ್ಯದಲ್ಲೂ ಪ್ರಸ್ತುತ ಪ್ರಿಯವಾದ ವಸ್ತುವನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ಪದ್ಯದೊಳಗೆಯೇ ಆದಿ-ಅಂತ್ಯ ಇರುವ ಕಥೆಯನ್ನು ರಸವತ್ತಾಗಿ ಹೇಳುವ ವಿಶಿಷ್ಟ ಕವಿ ಅವರಾಗಿದ್ದು, ಕನ್ನಡ ಭಾಷೆ ಹಾಗೂ ಸಂಸ್ಕೃತಿಯಲ್ಲಿ ಅವರ ಹೆಸರು ಅಜರಾಮರ ಎಂದು ಅವರು ಅಭಿಪ್ರಾಯಪಟ್ಟರು.

ಸಾಹಿತಿ ಡಾ. ಕಮಲಾ ಹಂಪನಾ ಮಾತನಾಡಿ, ಕೆಎಸ್‌ನ ಅವರ ಪ್ರತಿ ಕವನವೂ ಪ್ರೀತಿ-ಪ್ರೇಮಗಳ ಚಿರಂತನವಿರುವಂತೆ. ಮಧ್ಯಮ ವರ್ಗದ ತವಕ-ತಲ್ಲಣಗಳನ್ನೂ ಅವರು ಅಷ್ಟೇ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಅವರ ಪ್ರತಿ ಭಾವಗೀತೆಯೂ ಒಂದು ಸಿನಿಮಾ ಆಗುವಷ್ಟರ ಮಟ್ಟಿನ ಕಥೆ ಹೊಂದಿದೆ. ಇವೆಲ್ಲವನ್ನೂ ದಾಟಿ ಅವರೊಬ್ಬ ಸರಳ ಸಜ್ಜನಿಕೆಯ ವ್ಯಕ್ತಿ ಎಂದರು.

ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸಂಚಾಲಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, ಕೆಎಸ್‌ನ ನೆಲವನ್ನೇ ದೇವರು ಎಂದು ನಂಬಿ ಬದುಕಿದ ಹಾಗೂ ಮಧ್ಯಮವರ್ಗದ ಇತಿಹಾಸವನ್ನು ಕಾವ್ಯದ ಮೂಲಕವೂ ಹೇಳಬಹುದೆಂದು ತೋರಿಸಿಕೊಟ್ಟ ನಮ್ಮ ನಡುವಿನ ದೈನಂದಿನ ಕವಿ. ಅಡಿಗರು ಹಾಗೂ ಕೆಎಸ್‌ನ ಎರಡು ವೈರುಧ್ಯಗಳಾಗಿದ್ದು, ಇಬ್ಬರ ಸಾಹಿತ್ಯ ಕೃಷಿ ಕನ್ನಡದ ಮಟ್ಟಿಗೆ ಸುವರ್ಣಯುಗ ಎಂದು ಬಣ್ಣಿಸಿದರು.

ನಿರ್ದೇಶಕ ಟಿ.ಎಸ್. ನಾಗಾಭರಣ ಅವರ ಅಧ್ಯಕ್ಷತೆಯಲ್ಲಿ 'ಕೆ.ಎಸ್. ನರಸಿಂಹಸ್ವಾಮಿ: ವ್ಯಕ್ತಿತ್ವ ಮತ್ತು ಕೃತಿಗಳು' ಎಂಬ ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗಿತ್ತು. ಸಾಹಿತಿ ಎಂ.ವಿ.ವೆಂಕಟೇಶಮೂರ್ತಿ ಗೋಷ್ಠಿಯಲ್ಲಿ ವಿಚಾರ ಮಂಡಿಸಿದರು. ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್ ಹಾಗೂ ಜೈನ್ ವಿಶ್ವವಿದ್ಯಾಲಯದ ಪ್ರಾಂಶುಪಾಲೆ ಡಾ.ಶಾಂತಿ ಉಪಸ್ಥಿತರಿದ್ದರು.



ಜೈನ್ ವಿಶ್ವವಿದ್ಯಾಲಯದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ವಿಚಾರಸಂಕಿರಣದಲ್ಲಿ ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಕಮಲಾ ಹಂಪನಾ, ನಾಗಾಭರಣ ಮತ್ತಿತರರು ಪುಷ್ಪ ನಮನ ಸಲ್ಲಿಸಿದರು.

> ಕನ್ನಡ ಸಾಹಿತ್ಯ ಲೋಕದಲ್ಲಿ ರತ್ನಾಕರವರ್ಣಿಯ ನಂತರ ಅತ್ಯಂತ ಪ್ರಭಾವಿ ಶೃಂಗಾರ ಕಾವ್ಯಗಳನ್ನು ರಚಿಸಿದವರು ಕವಿ ಕೆ.ಎಸ್.ನರಸಿಂಹಸ್ವಾಮಿ. ದಾಂಪತ್ಯಗೀತೆಯನ್ನು ಅಶ್ಲೀಲವೂ ಅಲ್ಲದ, ಗಾಂಭೀರ್ಯವೂ ಅಲ್ಲದ ತಮ್ಮ ಹದವಾದ ಭಾಷೆಯಲ್ಲಿ ಹೇಳುತ್ತ, ಭಾವನಾ ಪ್ರಪಂಚವನ್ನೇ ಕಣ್ಣೆದುರಿಗೆ ತೋರಿಸುವ ಶಕ್ತಿ ಅವರ ಬರವಣಿಗೆಯಲ್ಲಿತ್ತು. ದಾಂಪತ್ಯ ಸಾಹಿತ್ಯದ ಭಾಷೆಗೆ ಹದವಾದ ಸೂಕ್ಷ್ಮತೆ ಕೊಟ್ಟ ಹೆಗ್ಗಳಿಕೆ ಅವರದ್ದು.
>
> । ಡಾ. ಚಂದ್ರಶೇಖರ ಕಂಬಾರ ಸಾಹಿತಿ